ಒ ಎಸ್ ನಂಃ 290/2012
ಪಿಡಬ್ಲ್ಯೂಃ 1 ಹಾಜರು

ದಿನಾಂಕಃ21-11-2015 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಶ್ರೀ ಎಲ್‌ಎಂಎಸ್ ವಕೀಲರಿಂದಃ 2 ರಿಂದ 5 ಮತ್ತು 7 ರಿಂದ 9 ನೇ ಪ್ರತಿವಾದಿಗಳ ಪರಃ

ನನ್ನ ಹೆಸರಿನಲ್ಲಿ ದಿಲ್ಲಿ ಟೆಕ್ಸ್‌ಟೈಲ್ಸ್ ಎನ್ನುವ ಅಂಗಡಿ ಇದೆ ಎಂದರೆ ಸದರಿ ಹೆಸರಿನ ಅಂಗಡಿಯನ್ನು ನಾನು ನಡೆಸುತ್ತಿರುವುದು ನಿಜ. ಆದರೆ ಸದರಿ ಅಂಗಡಿ ಇರುವ ಜಾಗ ನನ್ನದಲ್ಲ. ಸದರಿ ಜಾಗ ರಾಮಚಂದ್ರ ಈರಪ್ಪ ಅಂಕದವರ ಅಂದರೆ 2ನೇ ಪ್ರತಿವಾದಿಯ ಹೆಸರಿನಲ್ಲಿದೆ. ದಿಲ್ಲಿ ಟೆಕ್ಸಟೈಲ್ಸ್ ಸಂಸ್ಥೆಗೆ ನಾನು ನನ್ನ ಹೆಂಡತಿ ಕಸ್ತೂರಿ ಪಾಲುದಾರರಾಗಿದ್ದೇವೆ. ದಿಲ್ಲಿ ಟೆಕ್ಸಟೈಲ್ಸ್ ಸಂಸ್ಥೆ ನನಗೆ ಮತ್ತು ನನ್ನ ಹೆಂಡತಿ ಕಸ್ತೂರಿಗೆ ಮಾತ್ರ ಸಂಬಂಧಪಟ್ಟದ್ದು ಎಂದರೆ ಸರಿ. ಸದರಿ ಸಂಸ್ಥೆಯನ್ನು ಬಿಟ್ಟು ಬೇರೆ ಯಾವುದೇ ಸಂಸ್ಥೆಗೆ ನಾನು ಪಾಲುದಾರನಾಗಿರುವುದಿಲ್ಲ. ದಿಲ್ಲಿ ಟೆಕ್ಸಟೈಲ್ಸ್ ಸಂಸ್ಥೆಯ ಲಾಭ ನಷ್ಟಗಳಿಗೆ ನಾನು ನನ್ನ ಹೆಂಡತಿ ಮಾತ್ರ ಪಾಲುದಾರರು ಎಂದರೆ ಸಾಕ್ಷಿ ಸ್ವತಃ ಹೇಳುತ್ತಾರೆ ನಷ್ಟಕ್ಕೆ ಮಾತ್ರ ನಾವು ಪಾಲುದಾರರು. ಲಾಭದಲ್ಲಿ ಎಲ್ಲರಿಗೂ ಪಾಲು ಇರುತ್ತದೆ. ಹಾಗೆ ಲಾಭದಲ್ಲಿ ಎಲ್ಲರಿಗೂ ಪಾಲು ಇದೆ ಅಂತಾ ಪಾಲುದಾರಿಕೆ ಪತ್ರದಲ್ಲಿ ಬರೆಸಿಲ್ಲ. ದಿಲ್ಲಿ ಸಮೂಹ ಸಂಸ್ಥೆಗಳನ್ನು ಆಯಾ ಸಂಸ್ಥೆಗಳ ಪಾಲುದಾರರು ನಡೆಸುತ್ತಾರೆ ಎಂದರೆ ಸರಿ.

ಆರ್ ಎಸ್‌ನಂಃ 182/7 (ಐಟಂ ನಂ 1) ಜಮೀನನ್ನು ನಾನು ದುಂಡೇಶ ಕಾಮಪ್ಪ ಕುಳ್ಳೂರ ಎನ್ನುವವರಿಗೆ ಮಾರಾಟ ಮಾಡಿದ್ದೇನೆ. ಸಾಕ್ಷಿ ಮುಂದುವರೆದು ಹೇಳುತ್ತಾರೆ ಸದರಿ ಆಸ್ತಿಯನ್ನು ನಾವೆಲ್ಲ ಕೂಡಿ ಮಾರಾಟ ಮಾಡಿದ್ದೇವೆ. ಸದರಿ ಆಸ್ತಿ ನನ್ನ ಹೆಸರಿನಲ್ಲಿಲತ್ತು. ಅದನ್ನು ಒಟ್ಟು 12 ಲಕ್ಷ ರೂಗಳಿಗೆ ಖರೀದಿಗೆ ಕೊಡಲಾಗಿದೆ. ಸದರಿ ಆಸ್ತಿ ಖರೀದಿಗೆ ಕೊಡುವ ಸಮಯದಲ್ಲಿ ಈ ದಾವೆ ಚಾಲ್ತಿಯಲ್ಲಿತ್ತು ಎಂದರೆ ಸರಿ. ಸದರಿ

ಖರೀದಿದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿಲ್ಲ ಎಂದರೆ ಸರಿ. ಖರೀದಿ ಪತ್ರಕ್ಕೆ ನಾನೊಬ್ಬನೇ ಸಹಿ ಮಾಡಿದ್ದೆ ಎಂದರೆ ಸರಿ. ಆದರೆ ಖರೀದಿ ರಖಂನ್ನು ಎಲ್ಲರೂ ಹಂಚಿಕೊಂಡಿದ್ದೇವೆ. ಹಾಗೆ ಎಲ್ಲರೂ ಕೂಡಿ ಖರೀದಿಯ ಹಣ ಹಂಚಿಕೊಂಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಉಳಿದವರಾರೂ ಆ ದಿನ ನೊಂದಣಿ ಕಚೇರಿಗೆ ಬಂದು ಸಹಿ ಮಾಡಿಲ್ಲ ಎಂದರೆ ಸರಿ. ಅಗತ್ಯವಿಲ್ಲದ ಕಾರಣ ಖರೀದಿ ಪತ್ರಕ್ಕೆ ಉಳಿದವರ ಸಹಿ ಪಡೆದುಕೊಂಡಿರಲಿಲ್ಲ. ಎಕರೆಗೆ 22 ಲಕ್ಷ ರೂಗಳಂತೆ ಸದರಿ ಜಮೀನನ್ನು ನಾನು ಮಾರಾಟ ಮಾಡಿ ಸಂಪೂರ್ಣ ಖರೀದಿ ರಖಂನ್ನು ನಾನೇ ಇಟ್ಟುಕೊಂಡಿದ್ದೇನೆ ಎಂದರೆ ಸರಿ ಅಲ್ಲ. ಆರ್‌ಎಸ್ ನಂಃ 182/7 ರ ಜಮೀನನ್ನು ನನ್ನ ತಂದೆ ನನ್ನ ಹೆಸರಿನಲ್ಲಿ ಮಾಡಿದ್ದರು. ಯಾವ ದಾಖಲೆಯ ಆಧಾರದಲ್ಲಿ ಸದರಿ ಜಮೀನಿನ ಉತಾರದಲ್ಲಿ ನನ್ನ ಹೆಸರು ದಾಖಲಾಗಿತ್ತು ಅಂತಾ ಹೇಳಲು ಬರುವುದಿಲ್ಲ.

ದಾವಾ ಐಟಂ ನಂ 11 ಮತ್ತು 12 ( ಪ್ಲಾಟ ನಂಃ11 ಮತ್ತು 21) ಇವುಗಳನ್ನು ನನ್ನ ಹೆಸರಿನಲ್ಲಿ ಖರೀದಿ ಮಾಡಲಾಗಿದೆ ಎಂದರೆ ಸರಿ. ನಂತರ ನಾನು ಸದರಿ ಆಸ್ತಿಗಳಲ್ಲಿ ಮನೆ ಕಟ್ಟಿಕೊಂಡಿದ್ದೇನೆ ಎಂದರೆ ಸರಿ. ಈಗ ನನಗೆ ತೋರಿಸಿರುವ ದಿಃ 1.12.2009 ರ ದಾಖಲೆಯಲ್ಲಿರುವ ಸಹಿ ನನ್ನದ್ದಾಗಿರುತ್ತದೆ. ದಾವಾ ಐಟಂ ನಂ 11 ಮತ್ತು 12 ರ ಆಸ್ತಿಗಳನ್ನು ಖರೀದಿಸುವಾಗ 2ನೇ ಪ್ರತಿವಾದಿಯಿಂದ 10 ಲಕ್ಷ ರೂ ಹಣ ಪಡೆದುಕೊಂಡು ಸದರಿ ದಾಖಲೆಯನ್ನು ಬರೆದುಕೊಟ್ಟಿದ್ದೇನೆ ಎಂದರೆ ಸರಿ ಅಲ್ಲ. ಸಾಕ್ಷಿ ಮುಂದುವರೆದು ಹೇಳುತ್ತಾರೆ 2ನೇ ಪ್ರತಿವಾದಿಯಿಂದ ನಾನು ಯಾವುದೇ ಹಣ ಪಡೆದಿಲ್ಲ ಮತ್ತು ಸದರಿ ದಾಖಲೆಯಲ್ಲಿರುವ ಸಹಿ ನನ್ನದಲ್ಲ. ಸದರಿ ದಾಖಲೆಯನ್ನು ಸಾಕ್ಷಿ ಈ ಹಿಂದೆ ಒಪ್ಪಿಕೊಂಡಿರುವ ಕಾರಣ ಮತ್ತು ಅನುಕೂಲತೆಯ ದೃಷ್ಟಿಯಿಂದ ರುಜುವಾತು ಪಡಿಸುವ

ಒ ಎಸ್ ನಂಃ 290/2012
ಪಿಡಬ್ಲ್ಯೂಃ 1 ಹಾಜರು

ಶರತ್ತಿನ ಮೇರೆಗೆ ಅದನ್ನು ನಿಡಿ 1 ಎಂದು ಗುರ್ತಿಸಲಾಯಿತು. ವಾದ ಪತ್ರದಲ್ಲಿರುವ ಸಹಿಗಳು ನನ್ನದ್ದೆ ಆಗಿರುತ್ತದೆ. ನಿಡಿ 1 ರಲ್ಲಿರುವ ಸಹಿ ನನ್ನದಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ದಾವಾ ಐಟಂ ನಂ 11 ಮತುತ 12 ರ ಆಸ್ತಿಯಲ್ಲಿ ನೆಲ ಮಹಡಿ ಮತ್ತು ಮೊದಲ ಮಹಡಿ ಇರುವ ಒಂದು ಮನೆಯನ್ನು ನನ್ನ ಹೆಸರಿನಲ್ಲಿಯೇ ಪರವಾನಿಗೆ ಪಡೆದು ಕಟ್ಟಿದ್ದು, ಅದರಲ್ಲಿ ನಾನು ಮತ್ತು ನನ್ನ ಹೆಂಡತಿ ಮಕ್ಕಳು ವಾವಿರುತ್ತೇವೆ ಎಂದರೆ ಸರಿ. ಸದರಿ ಸ್ಥಳ ಮತ್ತು ಮನೆಯಲ್ಲಿ ನನ್ನ ಅಣ್ಣತಮ್ಮಂದಿರರಿಗೆ ಕೂಡ ಹಕ್ಕು ಇರುತ್ತದೆ. ನಾನು ಮತ್ತು 10 ಹಾಗೂ 11 ನೇ ಪ್ರತಿವಾದಿಗಳು ಬೇರೆ ಬೇರೆ ಮನೆಯಲ್ಲಿ ವಾಸವಿರುತ್ತೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಹೇಳುತ್ತಾರೆ ನಮ್ಮ ವ್ಯವಹಾರ ಒಂದೇ ಇರುತ್ತದೆ. ನಮ್ಮ ಊಟ ಉದ್ಯೋಗ ಮತ್ತು ವ್ಯವಹಾರ ಬೇರೆ ಬೇರೆ ಎಂದರೆ ಸರಿ ಅಲ್ಲ. ನನ್ನ ಅಜ್ಜನ ಹೆಸರು ಕೊನಪ್ಪಾ ಎಂದರೆ ಸರಿ. ದಾವಾ ಐಟಂ ನಂ 1 ರ ಆಸ್ತಿ ನನ್ನ ತಂದೆಗೆ ಹೇಗೆ ಬಂದಿತ್ತು ಅಂತಾ ನನಗೆ ಗೊತ್ತಿಲ್ಲ. ನನ್ನ ಅಜ್ಜ ಕೊನಪ್ಪ ಅಕ್ಕಿಸಾಗರದವರು ಮತ್ತು ಅಲ್ಲಿ ಅವರು ಶೇತ್ಕಿ ಮಾಡಿಕೊಂಡು ಇದ್ದಿದ್ದರು ಎಂದರೆ ಸರಿ ಅಲ್ಲ. ನಾನು ಹುಟ್ಟಿದ್ದು 1959 ರಲ್ಲಿ. 2 ಮತ್ತು 3 ನೇ ಪ್ರತಿವಾದಿಗಳು ಅವಳಿ-ಜವಳಿ ಮಕ್ಕಳು ಎಂದರೆ ಸರಿ. ಅವರಿಬ್ಬರೂ ಮೊದಲು ಗೋಕಾಕದ ಸುತ್ತಮುತ್ತಲೂ ಇರುವ ಹಳ್ಳಿಗಳಲ್ಲಿ ನಡೆಯುವ ಸಂತೆಗೆ ಬಟ್ಟೆ ತೆಗೆದುಕೊಂಡು ಹೋಗಿ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಹೇಳುತ್ತಾರೆ ಅವರ ಜೊತೆ ನಾನು ಕೂಡ ಹೋಗುತ್ತಿದ್ದೆ. ನನ್ನ ಹಾಗೂ ಅವರ ವಯಸ್ಸಿನ ನಡುವೆ ಸುಮಾರು 9 ವರ್ಷಗಳ ಅಂತರವಿರುತ್ತದೆ. ನಾನು 7 ನೇ ತರಗತಿ ತನಕ ಶಾಲೆ ಕಲಿತಿದ್ದೇನೆ. 3 ನೇ ಪ್ರತಿವಾದಿ ಶಾಲೆ ಕಲಿತಿಲ್ಲ. 2 ಮತ್ತು 3 ನೇ ಪ್ರತಿವಾದಿಗಳು ಸಂತೆಗೆ

ಹೋಗುತ್ತಿದ್ದ ಸಮಯದಲ್ಲಿ ನಾನು ಅಪ್ರಾಪ್ತ ವಯಸ್ಕನಾಗಿದ್ದೆ ಮತ್ತು ಆಗ ನಾನು ಶಾಲೆಗೆ ಹೋಗುತ್ತಿದ್ದ ಕಾರಣ 2 ಮತ್ತು 3 ನೇ ಪ್ರತಿವಾದಿಗಳ ಜೊತೆ ಸಂತೆಗೆ ಹೋಗುತ್ತಿರಲಿಲ್ಲ ಎಂದರೆ ಸರಿ ಅಲ್ಲ. ನಾನು ಶಾಲೆಯಲ್ಲಿ ಬುದ್ಧಿವಂತ ವಿದ್ಯಾರ್ಥಿಯಾಗಿದ್ದೆ ಎಂದರೆ ನಾನು ಸಾಮಾನ್ಯ ಬುದ್ಧಿಮತ್ತೆಯ ವಿದ್ಯಾರ್ಥಿಯಾಗಿದ್ದೆ. ಪ್ರತಿದಿನ ಶಾಲೆಗೆ ಹೋಗಿ ಎಲ್ಲಾ ಪಟ್ಟಿ ಚಟುವಟಿಕೆಗಳನ್ನು ಕ್ರಮ ಪ್ರಕಾರ ಮಾಡುವವರು ಮಾತ್ರ ಸಾಮಾನ್ಯ ಬುದ್ಧಿವಂತರಿರುತ್ತಾರೆ ಎಂದರೆ ಸರಿ. ನಾನು ಪ್ರಾಪ್ತ ವಯಸ್ಕನಾಗುವವರೆಗೂ ಶಾಲೆಗೆ ಹೋಗುತ್ತಿದ್ದೆ ಮತ್ತು 2 ಹಾಗೂ 3ನೇ ಪ್ರತಿವಾದಿಗಳ ಜೊತೆ ಸಂತೆಗೆ ಹೋಗಿ ಬಟ್ಟೆ ವ್ಯಾಪಾರ ಮಾಡುತ್ತಿರಲ್ಲಿ ಎಂದರೆ ಸರಿ ಅಲ್ಲ. ನಾನು ಪ್ರಾಪ್ತ ವಯಸ್ಕನಾದ ನಂತರ ಕೂಡ 2 ಮತ್ತು 3 ನೇಪ್ರತಿವಾದಿಗಳಿಗೆ ವ್ಯಾಪಾರದಲ್ಲಿ ಯಾವುದೇ ಸಹಾಯ ಮಾಡುತ್ತಿರಲಿಲ್ಲ ಎಂದರೆ ಸರಿ ಅಲ್ಲ.

1974 ರಲ್ಲಿ 2ನೇ ಪ್ರತಿವಾದಿ ಒಂದು ಟ್ರಕ್ ಖರೀದಿ ಮಾಡಿದ್ದ ಎಂದರೆ ಸರಿ. ಸದರಿ ಟ್ರಕನ ವ್ಯವಹಾರದಿಂದ 2ನೇ ಪ್ರತಿವಾದಿಗೆ ಪ್ರತ್ಯೇಕ ಉತ್ಪನ್ನ ಬರುತ್ತಿತ್ತು ಎಂದರೆ ಸರಿ ಅಲ್ಲ. ದಿಲ್ಲಿ ರೇಡಿಮೇಡ ಸ್ಟೋರ್ಸ್ ಎನ್ನುವ ಸಂಸ್ಥೆ 3ನೇ ಪ್ರತಿವಾದಿಯ ಹೆಸರಿನಲ್ಲಿರುವ ಪಾಲುದಾರಿಕೆ ಸಂಸ್ಥೆ ಎಂದರೆ ಸರಿ. ಸದರಿ ಸಂಸ್ಥೆಯಲ್ಲಿ ನಾನು ಪಾಲುದಾರನಲ್ಲ ಎಂದರೆ ಸರಿ.

ದಾವಾ ಐಟಂ ನಂ 5 (ಸಿಟಿಎಸ್ 3226/ಎ/1) ಮೊದಲು ಖುಲ್ಲಾ ಜಾಗವಿತ್ತು ಎಂದರೆ ಸರಿ ಅಲ್ಲ. ಅಲ್ಲಿ ಮೊದಲಿನಿಂದಲೂ ಮನೆ ಇತ್ತು. ಅದು ನನ್ನ ತಂದೆಯ ತಂದೆ ಆಸ್ತಿಯಾಗಿರುತ್ತದೆ. ಸದರಿ ಜಾಗದಲ್ಲಿದ್ದ ಮನೆಯನ್ನು ಭಾಡಿಗೆಗೆ ಕೊಟ್ಟಿರಲಿಲ್ಲ. ಸದರಿ

ಮನೆಯಲ್ಲಿ 2 ಮತ್ತು 3 ನೇ ಪ್ರತಿವಾದಿಗಳು ಮೊದಲು ಐಸ್‌ಕ್ಯಾಂಡಿ ಉದ್ಯಮ ಪ್ರಾರಂಭಿಸಿದ್ದರು ಎಂದರೆ ಸರಿ. 1981 ರಲ್ಲಿ ಪ್ರಶಾಂತ ಲಾಡ್ಜ್ ಪ್ರಾರಂಭವಾಗಿರುತ್ತದೆ.

ದಿಲ್ಲಿ ಕ್ರಿಯೇಷನ್ ಸಂಸ್ಥೆಗೆ 7 ಮತ್ತು 19 ನೇ ಪ್ರತಿವಾದಿ ಪಾಲುದಾರರು ಎಂದರೆ ಸರಿ. ದಿಲ್ಲಿ ಬೆಸ್ಟ್ ಸೆಲೆಕ್ಸ್‌ನ್ ಸಂಸ್ಥೆಗೆ 10 ನೇ ಪ್ರತಿವಾದಿ ಪಾಲುದಾರರು ಎಂದರೆ ಸರಿ. ದಾವಾ ಐಟಂ ನಂ 26ರ ದಿಲ್ಲಿ ಫ್ಯಾಷನ್ ಪ್ಲಾಜಾ ಸಂಸ್ಥೆಗೆ 4 ಮತ್ತು 5 ನೇ ಪ್ರತಿವಾದಿ ಪಾಲುದಾರರು ಎಂದರೆ ಸರಿ. ಸದರಿ ದಿಲ್ಲಿ ಬೆಸ್ಟ್ ಸೆಲೆಕ್ಸ್‌ನ್, ದಿಲ್ಲಿ ಕ್ರಿಯೇಷನ್, ದಿಲ್ಲಿ ಫ್ಯಾಷನ್ ಪ್ಲಾಜಾ . . . ಈ ಯಾವುದೇ ಸಂಸ್ಥೆಗಳಿಗೆ ನಾನು ಪಾಲುದಾರನಲ್ಲ ಎಂದರೆ ಸರಿ. 2ನೇ ಪ್ರತಿವಾದಿ ಮೊದಲು ಪಟಾಕಿ ವ್ಯಾಪಾರ ಕೂಡ ಮಾಡುತ್ತಿದ್ದ ಎಂದರೆ ಸರಿ. ಸಾಕ್ಷಿ ಪ್ನಃ ಹೇಳುತ್ತಾರೆ ಎಲ್ಲರೂ ಕೂಡಿ ಪಟಾಕಿ ವ್ಯಾಪಾರ ಮಾಡುತ್ತಿದ್ದೇವು. ನಾವೆಲ್ಲ ಅಣ್ಣತಮ್ಮಂದಿರು ಕೂಡಿ ಪಟಾಕಿ ವ್ಯಾಪಾರ ಮಾಡುತ್ತಿರಲಿಲ್ಲ ಮತ್ತು 2ನೇ ಪ್ರತಿವಾದಿ ಒಬ್ಬನೇ ಸದರಿ ವ್ಯವಹಾರ ನಡೆಸುತ್ತಿದ್ದ ಎಂದರೆ ಸರಿ ಅಲ್ಲ.

ದಿಲ್ಲಿ ಟೆಕ್ಸ್‌ಟೈಲ್ಸ್ ದಾವಾ ಐಟಂ ನಂ 27 ರ ಆಸ್ತಿಯಲ್ಲಿರುತ್ತದೆ ಎಂದರೆ ಸರಿ. ಸದರಿ ಸ್ಥಳವನ್ನು 1995 ರಲ್ಲಿ 2ನೇ ಪ್ರತಿವಾದಿ ಖರೀದಿಸಿದ್ದಾನೆ ಎಂದರೆ ಸಾಕ್ಷಿ ಸ್ವತಃ ಹೇಳುತ್ತಾರೆ ಎಲ್ಲರೂ ಕೂಡಿ 2ನೇ ಪ್ರತಿವಾದಿಯ ಹೆಸರಿನಲ್ಲಿ ಸದರಿ ಸ್ಥಳವನ್ನು ಖರೀದಿಸಿದ್ದೇವೆ. ಖರೀದಿ ಪತ್ರ 2ನೇ ಪ್ರತಿವಾದಿ ಒಬ್ಬನ ಹೆಸರಿನಲ್ಲಿದೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ ನಾನು ಮತ್ತು ನನ್ನ ಹೆಂಡತಿ ನಮ್ಮ ಹೆಸನರಿಲ್ಲಿರುವ ಸಂಸ್ಥೆಯ ವ್ಯವಹಾರವನ್ನು ನಡೆಸುತ್ತಿದ್ದೇವೆ ಎಂದರೆ ಸರಿ. ಸದರಿ ಸ್ಥಳದ ಬಾಬ್ತು ನಾವು 2ನೇ ಪ್ರತಿವಾದಿಗೆ ಭಾಡಿಗೆ ನೀಡುತ್ತಿದ್ದೇವೆ ಎಂದರೆ ಸರಿ ಅಲ್ಲ. ಕಳೆದ 3 ವರ್ಷಗಳಿಂದ ಹಾಗೆ ಭಾಡಿಗೆ ನೀಡುವುದನ್ನು ನಾವು ನಿಲ್ಲಿಸಿದ್ದೇವೆ ಎಂದರೆ

ಒ ಎಸ್ ನಂಃ 290/2012
ಪಿಡಬ್ಲ್ಯೂಃ 1 ಹಾಜರು

ಸಾಕ್ಷಿ ಸ್ವತಃ ಹೇಳುತ್ತಾರೆ ನಮ್ಮೊಳಗೆ ಪಾಲು ಆಗದ ಕಾರಣ ಭಾಡಿಗೆ ಕೊಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

2 ಮತ್ತು 3ನೇ ಪ್ರತಿವಾದಿಗಳು ಸಂತೆಗೆ ಹೋಗಿ ಬಟ್ಟೆ ಮಾರಾಟ ಮಾಡಿ ಬಂದ ಹಣ ಮತ್ತು 2ನೇಪ್ರತಿವಾದಿಯ ಪಟಾಕಿ ವ್ಯಾಪಾರದ ಹಣದಲ್ಲಿ 1962 ರಲ್ಲಿ ದಿಲ್ಲಿ ರೇಡಿಮೇಡ ಸ್ಟೋರ್ಸ್ ಎನ್ನುವ ಸಂಸ್ಥೆಯನ್ನು ಪ್ರಾರಂಭಿಸಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಹೇಳುತ್ತಾರೆ ಸದರಿ ಸಂಸ್ಥೆಯನ್ನು ನಮ್ಮ ತಂದೆಯವರೇ ಪ್ರಾರಂಭಿಸಿದ್ದಿರುತ್ತದೆ. ಹಾಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಮೊದಲಿನಿಂದಲೂ ಸದರಿ ಸಂಸ್ಥೆಗೆ 3ನೇ ಪ್ರತೀವಾದಿ ಮಾತ್ರ ಪಾಲುದಾರರಾಗಿದ್ದರು ಎಂದರೆ ಸಾಕ್ಷಿ ಸ್ವತಃ ಹೇಳುತ್ತಾರೆ ಮೊದಲು ನಮ್ಮ ತಂದೆ ಪಾಲುದಾರರಾಗಿದ್ದರು ನಂತರ 3ನೇ ಪ್ರತಿವಾದಿ ಪಾಲುದಾರರಾಗಿ ಸೇರಿಕೊಂಡಿದ್ದಾರೆ. ದಾವಾ ಐಟಂ ನಂ 16 ರ ಆಸ್ತಿಯನ್ನು ಭಾಡಿಗೆಗೆ ಪಡೆದು ದಿಲ್ಲಿ ರೇಡಿಮೇಡ ಸ್ಟೋರ ಸಂಸ್ಥೆಯನ್ನು ಪ್ರಾರಂಭಿಸಲಾಗಿತ್ತು ಎಂದರೆ ಸರಿ ಅಲ್ಲ. ನಾವು ನಾವು ನಡೆಸುತ್ತಿರುವ ಬಟ್ಟೆ ಅಂಗಡಿಗೆ ಬೇಕಾದ ಸಾಮಗ್ರಿಗಳನ್ನು ನಾವು ನಾವೇ ಪ್ರತ್ಯೇಕವಾಗಿ ತರಿಸಿಕೊಳ್ಳುತ್ತಿದ್ದೇವೆ ಎಂದರೆ ಸರಿ. ಆಯಾ ಸಂಸ್ಥೆಯವರು ಮಾಡಿದ ಸಾಲಕ್ಕೆ ಆಯಾ ಸಂಸ್ಥೆಯ ಪಾಲುದಾರರು ಮಾತ್ರ ಜವಾಬ್ದಾರರು ಎಂದರೆ ಸಾಕ್ಷಿ ಸ್ವತಃ ಹೇಳುತ್ತಾರೆ ಸಾಲಕ್ಕೆ ಎಲ್ಲರೂ ಜವಾಬ್ದಾರರಾಗಿರುತ್ತೇವೆ.

ಆದಾಯ ತೆರಿಗೆ ರಿಟರ್ನ್ಸ್‌ನಲ್ಲಿ ನಮ್ಮ ನಮ್ಮ ಹೆಸರಿನಲ್ಲಿರುವ ಆಸ್ತಿ ಮತ್ತು ವ್ಯವಹಾರದ ಲೆಕ್ಕವನ್ನು ಮಾತ್ರ ಕಾಣಿಸುತ್ತೇವೆ ಎಂದರೆ ಸರಿ, ಉಳಿದ ಆಸ್ತಿ ಮತ್ತು ಸಂಸ್ಥೆಗಳ ವ್ಯವಹಾರದ ಲೆಕ್ಕವನ್ನು ಸದರಿ ರಿಟರ್ನ್ಸ್‌ನಲ್ಲಿ ಕಾಣಿಸುವುದಿಲ್ಲ. ನಾವು ಒಬ್ಬರ ವ್ಯಾಪಾರ ವ್ಯವಹಾರದಲ್ಲಿ ಇನ್ನೊಬ್ಬರು ತಲೆ ಹಾಕುವುದಿಲ್ಲ ಎಂದರೆ ಸರಿ. ಹಾಗೆ ತಲೆ ಹಾಕಿದರೆ

ವ್ಯವಹಾರ ನಡೆಯುವುದಿಲ್ಲ. ನಾನು ನನ್ನ ಅಣ್ಣಂದಿರ ಜೊತೆ ದುಡಿದ ದುಡಿಮೆಯ ಪ್ರತಿಫಲವನ್ನು ಪಡೆದುಕೊಂಡು ಅವರನ್ನು ಬಿಟ್ಟು ಹೊರಗೆ ಬಂದಿದ್ದೇನೆ ಎಂದರೆ ಸರಿ ಅಲ್ಲ. ದಿಲ್ಲಿ ಸಮೂಹ ಸಂಸ್ಥೆಗಳು ದಾವಾ ಐಟಂ ನಂ 5 ರ ಕಟ್ಟಡದಲ್ಲಿಲ್ಲ ಮತ್ತು ಬೇರೆ ಬೇರೆ ಕಡೆ ಇರುತ್ತವೆ ಎಂದರೆ ಸರಿ. ನನ್ನ ಸಹೋದರರು ಮತ್ತು ಅವರ ಮಕ್ಕಳು ಅವರವರ ಹೆಸರಿನಲ್ಲಿರುವ ಆಸ್ತಿಗಳಲ್ಲಿ ಅವರವರಿಗೆ ಸೇರಿದ ಸಂಸ್ಥೆಯನ್ನು ನಡೆಸುತ್ತಾ ವ್ಯವಹಾರ ಮಾಡುತ್ತಿದ್ದಾರೆ ಎಂದರೆ ಸರಿ.

ನನ್ನ ಅಜ್ಜ ತೀರಿಕೊಂಡ 2-3 ವರ್ಷಗಳಲ್ಲಿ ನಾನು ಹುಟ್ಟಿರಬಹುದು. ನನ್ನ ಅಜ್ಜನ ಕಾಲದಲ್ಲಿ ನಮ್ಮ ಕುಟುಂಬಕ್ಕೆ ಯಾವುದೇ ನಿಶ್ಚಿತ ಉದ್ಯೋಗವಿದ್ದಿರಲಿಲ್ಲ ಎಂದರೆ ಸರಿ. ಬಟ್ಟೆ ಮಾರಾಟ ನಮ್ಮ ಕುಟುಂಬದ ಮೂಲ ಉದ್ಯೋಗವಲ್ಲ ಎಂದರೆ ಸರಿ. ದಾವಾ ಐಟಂ ನಂ 5 ರ ಆಸ್ತಿಯಲ್ಲಿ 11ನೇ ಪ್ರತಿವಾದಿ ಬನಶಂಕರಿ ಎಂಟರಪ್ರೈಸಸ್ ಎನ್ನುವ ಮೊಬೈಲ ಮಾರಾಟದ ಅಂಗಡಿ ನಡೆಸುತ್ತಿದ್ದಾನೆ ಎಂದರೆ ಸರಿ. ಪ್ರಶಾಂತ ಲಾಡ್ಜ್ ಕೆಳಭಾಗ ಖಾಲಿಯಾಗಿ ಉಳಿದಿದ್ದು , ಹಾಗೆ ಬಿಟ್ಟರೆ ನಷ್ಟವಾಗುತ್ತದೆ ಅಂತಾ 11ನೇ ಪ್ರತೀವಾದಿ ತಲೆ ಓಡಿಸಿ ಅಲ್ಲಿ ಸದರಿ ಮೊಬೈಲ ಉದ್ಯಮ ಪ್ರಾರಂಭಿಸಿದ್ದಾನೆ ಎಂದರೆ ಸರಿ. ದಾವಾ ಐಟಂ ನಂ 18 ರ ಆಸ್ತಿಯಲ್ಲಿ 10 ನೇ ಪ್ರತಿವಾದಿ ಜನತಾ ಫುಡ್ ಎನ್ನುವ ಊಟದ ಹೊಟೇಲ ಮತ್ತು ತಂಪುಪಾನೀಯ ಅಂಗಡಿ ನಡೆಸುತ್ತಿದ್ದರು ಎಂದರೆ ಸರಿ. ಸದರಿ ವ್ಯವಹಾರದಲ್ಲಿ ನಷ್ಟವಾದ ನಂತರ 10 ನೇ ಪ್ರತಿವಾದಿ ಅಲ್ಲಿ ದಿಲ್ಲಿ ಬೆಸ್ಟ ಕಲೆಕ್ಷನ್ ಎನ್ನುವ ಸಂಸ್ಥೆಯನ್ನು ಪ್ರಾರಂಬಿಸಿದ್ದಾರೆ ಎಂದರೆ ಸರಿ. ಹೊಟೆಲ ಮತ್ತು ತಂಪುಪಾನೀಯದ ಅಂಗಡಿಯನ್ನು ಮುಂದುವರೆಸಿದಲ್ಲಿ ಇನ್ನು ನಷ್ಟವಾಗಿ ದಿವಾಳಿಯಾಗುತ್ತದೆ ಎನ್ನುವ ಕಾರಣಕ್ಕಾಗಿ 10 ನೇ ಪ್ರತಿವಾದಿ ಸದರಿ ಸಂಸ್ಥೆ ಪ್ರಾರಂಭಿಸಿದ್ದಾನೆ ಎಂದರೆ ಸರಿ. ನಾವು ಎಲ್ಲ ಅಣ್ಣತಮ್ಮಂದಿರು

ನಮ್ಮ ಬುದ್ಧಿವಂತಕೆ ಉಪಯೋಗಿಸಿ ಲಾಭಬರುವಂತಹ ಉದ್ಯೋಗ ಮಾಡುತ್ತಿದ್ದೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಹೇಳುತ್ತಾರೆ ಎಲ್ಲರೂ ಕೂಡಿ ಉದ್ಯೋಗ ಮಾಡುತ್ತಿದ್ದೇವೆ. ನನ್ನ ಹೆಸರಿನಲ್ಲಿರುವ ಆಸ್ತಿಗೆ ಸಂಬಂಧಪಟ್ಟಂತೆ ಮಾತ್ರ ನಾನು ತೆರಿಗೆ ತುಂಬುತ್ತಿದ್ದೇನೆ ಎಂದರೆ ಸರಿ. ನನ್ನ ಸಹೋದರರು ಅವರವರ ಹೆಸರಿನಲ್ಲಿರುವ ಆಸ್ತಿಗಳಿಗೆ ಅವರವರೇ ತೆರಿಗೆ ತುಂಬುತ್ತಿದ್ದಾರೆ ಎಂದರೆ ಸರಿ.

4 ಮತ್ತು 5ನೇ ಪ್ರತಿವಾದಿಗಳು ದಿಲ್ಲಿ ಫ್ಯಾಶನ್ ಪ್ಲಾಜಾ ಪ್ರಾರಂಭಿಸಲು ಪಡೆದ ಪರವಾನಿಗೆಯನ್ನು ರದ್ದು ಪಡಿಸುವಂತೆ ಕೋರಿ ನಾನೇ ಅರ್ಜಿ ಕೊಟ್ಟಿದ್ದೆ ಏಕೆಂದರೆ ಈ ದಾವೆ ನಡೆಯುತ್ತಿರುವಾಗಲೇ 3ನೇ ಪ್ರತಿವಾದಿ ನನಗೆ ಗೊತ್ತಿಲ್ಲದಂತೆ ಸದರಿ ಆಸ್ತಿಯನ್ನು 4 ಮತ್ತು 5 ನೇ ಪ್ರತಿವಾದಿಗಳ ಹೆಸರಿನಗೆ ಮಾಡಿಸಿದ್ದರು. ಈ ದಾವೆ ನಡೆಯತ್ತಿರುವಾಗ ನಾನು ದಾವಾ ಐಟಂ ನಂ 1 ನ್ನು ಮಾರಾಟ ಮಾಡಿದ ಬಗ್ಗೆ ನನ್ನ ಸಹೋದರರು ತಕರಾರು ಮಾಡಿಲ್ಲ. ಏಕೆಂದರೆ ಅವರಿಗೆ ಕೂಡ ಹಣದ ಅವಶ್ಯಕತೆ ಇದ್ದಿತ್ತು. ಸದರಿ ಆಸ್ತಿಯನ್ನು ಮಾರಾಟ ಮಾಡಿ ಪೂರ್ತಿ ಹಣವನ್ನು ಉಪಯೋಗಿಸಲು ಬಿಟ್ಟಲ್ಲಿ ನಾನು ಈ ದಾವೆಯನ್ನು ಮರಳಿ ಪಡೆಯುತ್ತೇನೆಂದು ಪ್ರತಿವಾದಿಗಳನ್ನು ನಂಬಿಸಿ ಸದರಿ ಆಸ್ತಿಯ ಮೇಲಿದ್ದ ಮನಾಯಿ ಆದೇಶವನ್ನು ಹಿಂಪಡೆಯುವಂತೆ ಮಾಡಿದ್ದೆ ಎಂದರೆ ಸರಿ ಅಲ್ಲ. ಸದರಿ ಆದೇಶ ಹಿಂಪಡೆಯುವವರೆಗೂ ಈ ದಾವೆಯಲ್ಲಿ ನಾನು ರಾಜಿಯಾಗುತ್ತೇನೆ ಅಂತಾ ಮುದ್ದತ್ತು ಪಡೆಯುತ್ತಾ ಬಂದಿದ್ದೆ ಎಂದರೆ ಸರಿ.

ನಾನು ಗೋಕಾಕ ಅರ್ಬನ ಬ್ಯಾಂಕದಲ್ಲಿ 25 ಲಕ್ಷ ರೂ ದೀರ್ಘಾವಧಿ ಸಾಲ ಪಡೆದಿದ್ದು ಸದರಿ ಸಾಲದ ಹಣವನ್ನು ನಾನೇ ಮರುಪಾವತಿ ಮಾಡುತ್ತಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಹೇಳುತ್ತಾರೆ ನನ್ನ ಸಂಸ್ಥೆಯ ಪರವಾಗಿ ನಾನು ಸಾಲದ ಹಣವನ್ನು

ಓ ಎಸ್ ನಂಃ 290/2012
ಪಿಡಬ್ಲ್ಯೂಃ 1 ಹಾಜರು

ಮರುಪಾವತಿ ಮಾಡುತ್ತಿದ್ದೇನೆ. ದಾವಾ ಐಟಂ ನಂ 26 ರಲ್ಲಿ ಇರುವ ದಿಲ್ಲಿ ಫ್ಯಾಶನ್ ಪ್ಲಾಜಾ ಸಂಸ್ಥೆಗೆ ಸಾಲ ಕೊಡಬಾರದೆಂದು ಗೋಕಾಕದ ಎಲ್ಲಾ ಹಣಕಾಸು ಸಂಸ್ಥೆಗಳಿಗೆ ನೋಟಿಸು ಕೊಟ್ಟಿದ್ದೆ ಎಂದರೆ ಸರಿ. ಆ ಬಳಿಕ ನಾನು ಅರ್ಬನ ಬ್ಯಾಂಕದಲ್ಲಿ ಮತ್ತು ಇನ್ನಿತರ ಬ್ಯಾಂಕದಲ್ಲಿ ಸಾಲ ಪಡೆದಿದ್ದೇನೆ ಎಂದರೆ ಸರಿ ಅಲ್ಲ. ಆದರೆ ಹಳೆ ಸಾಲವನ್ನು ಟೇಕ್‌ಓವರ್ ಮಾಡಿಸಿದ್ದೇನೆ.

ಕ್ಯಾಟಲ್‌ಫೀಡ ವ್ಯವಹಾರದ ಪರವಾನಿಗೆ 4ನೇ ಪ್ರತಿವಾದಿಯ ಹೆಸರಿನಲ್ಲಿತ್ತು. ಅದನ್ನು ಒಂದು ವರ್ಷ ಮಾತ್ರ ನಡೆಸಿ ನಂತರ ಸದರಿ ವ್ಯವಹಾರವನ್ನು ನಿಲ್ಲಿಸಿದ್ದಾರೆ.

ಈ ಹಂತದಲ್ಲಿ ಮುಂದಿನ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸರಿ ಅದೆ

( ಗಿರೀಶ ಭಟ್.ಕೆ.)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ.

ಸಾಕ್ಷಿಯ ಸಹಿ